ದಿನಾಂಕ:07.01.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಜಿ ಸಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ . ನನ್ನ ಜನ್ಮ ದಿನಾಂಕ 1975 ಆಗಿರುತ್ತದೆ. ನಮಗೆ ಹೊಲ ಬರಬೇಕು ಎಂದು ನಾವು ಈ ದಾವೆಯನ್ನು ಸಲ್ಲಿಸಿರುತ್ತೇವೆ. ನಮ್ಮ ತಂದೆ ಹೆಸರು ಸಿದ್ದನಾಯಕ. ಪ್ರತಿವಾದಿಗಳ ತಂದೆ ಹೆಸರು ಮೇಕೆ ರಂಗನಾಯಕ . ಮೇಕೆ ರಂಗನಾಯಕ ಮತ್ತು ಸಿದ್ದನಾಯಿಕರವರ ತಂದೆ ಹೆಸರು ಸಿದ್ದನಾಯಕ ಸಿದ್ದನಾಯಕರವರು ನನಗೆ ತಾತನಾಗಬೇಕು . ನನ್ನ ತಾತನ ಅಪ್ಪನ ಹೆಸರು ಮೇಕೆ ರಂಗನಾಯಕ.

ಸರ್ವೆ ನಂ.156 ಒಟ್ಟು 42 ಎಕರೆ 1 ಗುಂಟೆ ಇರುತ್ತದೆ. 23.09.1946 ರಲ್ಲಿ ಸರ್ವೆ ನಂ.156 ರಲ್ಲಿ 15 ಎಕರೆ 22 ಗುಂಟೆ ನನ್ನ ತಾತ ಸಿದ್ದನಾಯಕ ಬಿನ್ ಮೇಕೆ ರಂಗನಾಯಕನ ಹೆಸರಿನಲ್ಲಿ ಇತ್ತು ಎಂದರೆ ನಿಜ. ಸದರಿ 15 ಎಕರೆ 22 ಗುಂಟೆ ಜಮೀನಿನಲ್ಲಿ ನಮ್ಮ ತಂದೆ ಮತ್ತು ಪ್ರತಿವಾದಿಗಳ ತಂದೆಗೆ ಸಮವಾದ ಹಿಸ್ಸೆ ಇತ್ತು ಎಂದರೆ ನಿಜ.

ದಿಃ10.10.1973 ರಲ್ಲಿ ನನ್ನ ತಂದೆ ಸಿದ್ದನಾಯಕ ಮತ್ತು ಪ್ರತಿವಾದಿಗಳ ತಂದೆ ಮೇಕೆ ರಂಗನಾಯಕರವರು ಸಮವಾಗಿ 15 ಎಕರೆ 22 ಗುಂಟೆ ವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗದಲ್ಲಿ ವಾದಿಗಳಾದ ನಮಗೆ 8 ಎಕರೆ 18 ಗುಂಟೆ ಮತ್ತು ಪ್ರತಿವಾದಿಗಳಿಗೆ 8 ಎಕರೆ 18 ಗುಂಟೆ ಹಿಸ್ಸೆ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಲ್ಲಿ ನಮ್ಮ ಭಾಗಕ್ಕೆ ಬಂದ ಆಸ್ತಿಯನ್ನು ನಮ್ಮ ತಂದೆ ಅಂಬಲಗೆರೆಯ ಸಿದ್ದಲಿಂಗನಾಯಕ ಬಿನ್ ಸಿದ್ದನಾಯಕ ಇವರಿಗೆ 05.06.1974 ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಆಸ್ತಿಯನ್ನು ಮಾರಾಟ ಮಾಡಿದ ನಂತರ ಪ್ರತಿವಾದಿಗಳಿಗೆ ಬಂದಿದ್ದ ಜಮೀನನ್ನು ಅವರು ಮಾರಾಟ ಮಾಡದೇ ಹಾಗೇ ಉಳಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಮಾಡಿದ ಸಮಯದಲ್ಲಿ ಖರೀದಿದಾರರಾದ ಸಿದ್ದಲಿಂಗನಾಯಕ ಇವರು ಮುಂದೆ ತೊಂದರೆಯಾಗಬಾರದು ಎಂದು ನನ್ನ ತಂದೆಯ ತಮ್ಮನಾದ ಮೇಕೆ ರಂಗನಾಯಕನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.2 ರ 5 ಎಕರೆ 1 ಗುಂಟೆ ಜಮೀನೂ ಸಹ ನಮಗೂ ಮತ್ತು ಪ್ರತಿವಾದಿಗಳಿಗೂ ಸಮ ಭಾಗವಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ 5 ಎಕರೆ 1 ಗುಂಟೆ ಜಮೀನಿನಲ್ಲಿ ಹಿಂದೆ ಪ್ರತಿವಾದಿಯರು ಮೂರು ವರ್ಷದ ಕಬ್ಬನ್ನು ಬೆಳೆದಿದ್ದು ಆ ಸಮಯದಲ್ಲಿ ನಮ್ಮ ಅಕ್ಕ ತಂಗಿಯರ ಮದುವೆ ವಿಚಾರವಾಗಿ ಆ ಮೂರು ವರ್ಷದ ಬೆಳೆಯನ್ನು ಪಡೆದುಕೊಂಡು ಹಾಗೂ ಅಂಬಲಗೆರೆ ಯ ಮನೆಯ ಪ್ರತಿವಾದಿಯರ ಹಕ್ಕನ್ನು ಪಡೆದುಕೊಂಡು ದಾವಾ ಐಟಂ ನಂ.2 ರಲ್ಲಿ ನಮ್ಮ ಹಿಸ್ಸೆಯಲ್ಲಿರುವ ಅರ್ಧಾಂಶ ಹಿಸ್ಸೆಯನ್ನು 10.10.1973 ರಲ್ಲಿ ನನ್ನ ತಂದೆ ಪ್ರತಿವಾದಿಯರಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ಆಸ್ತಿಗಳನ್ನು ಜಂಟಿಯಾಗಿ ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1973 ರಿಂದ ನಮ್ಮ ಆಸ್ತಿಯನ್ನು ನಾವು ಅನುಭವಿಸಿಕೊಂಡು ಬರುತ್ತಿದ್ದು ಪ್ರತಿವಾದಿಗಳು ಅವರ ಪಾಲಿನ ಆಸ್ತಿಯನ್ನು ಅವರೇ ಅನುಭವಿಸಿಕೊಂಡು ಬರುತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಮುತ್ತಾತನ ಹೆಸರಾದ ಮೇಕೆ ರಂಗನಾಯಕ ತಂದೆ ಸಿದ್ದನಾಯಕ ಎನ್ನುವ ಹೆಸರನ್ನು ಮತ್ತು ಪ್ರತಿವಾದಿಯ ತಂದೆ ಹೆಸರು ಮೇಕೆ ರಂಗನಾಯಕ ತಂದೆ ಸಿದ್ದನಾಯಕ ಇರುವುದನ್ನು ದುರ್ಬಳಕೆ ಮಾಡಿಕೊಂಡು ಅವರ ಹೆಸರಿಗೆ ದಾಖಲೆ ಮಾಡಿಕೊಂಡಿದ್ದೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗಾಗಲೇ ನಮ್ಮ ಹಿಸ್ಸೆಗೆ ಬರಬೇಕಾದ ಆಸ್ತಿಯನ್ನು ನನ್ನ ತಂದೆ ಸಿದ್ದನಾಯಕ ಇವರು ಪಾಲು ವಿಭಾಗ ಆದ ನಂತರ 1973 ರಲ್ಲಿ ಅವರ ಹಿಸ್ಸೆಯನ್ನು ಮಾರಾಟ ಮಾಡಿದ್ದರಿಂದ ನಮಗೆ ದಾವಾಸ್ತಿ 1 ರಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಅದರಂತೆ ಈಗಾಗಲೇ ದಾವಾ ಐಟಂ ನಂ.2 ರಲ್ಲಿ ಪ್ರತಿವಾದಿಯರು ಬೆಳೆದ ಕಬ್ಬಿನ ಬೆಳೆಯನ್ನು ಮತ್ತು ಅಂಬಲಗೆರೆ ಗ್ರಾಮದ ಮನೆಯಲ್ಲಿ ಹಿಸ್ಸೆಯನ್ನು ಪಡೆದುಕೊಂಡು ದಾವಾ ಐಟಂ ನಂ.2 ನಮ್ಮ ಹಿಸ್ಸೆಯನ್ನು ಪ್ರತಿವಾದಿಯರಿಗೆ ಬಿಟ್ಟು ಕೊಟ್ಟಿದ್ದರಿಂದ ಆ ಆಸ್ತಿಯಲ್ಲಿಯೂ ಸಹ ನಮಗೆ ಯಾವುದೇ ಹಕ್ಕು ಇಲ್ಲ

ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಆಸ್ತಿ ಇದ್ದರೂ ಕೂಡ ನಮ್ಮ ಹಿಸ್ಸೆಯ ಆಸ್ತಿಯನ್ನು ಮಾರಾಟ ಮಾಡಿಕೊಂಡು ನಮ್ಮ ಮುತ್ತಾತನ ಹೆಸರಿನಲ್ಲಿ ಇದ್ದು ಪ್ರತಿವಾದಿಗಳು ಅದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ಮತ್ತು 2 ರಲ್ಲಿ ನಮಗೆ ಯಾವುದೇ ರೀತಿ ಹಕ್ಕು ಇಲ್ಲದಿದ್ದರೂ ಕೂಡ ಜಂಟಿಯಾಗಿ ಆಸ್ತಿ ಅನುಭವಿಸುತ್ತಿದ್ದೇವೆ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. _

<u>**ಮರು ವಿಚಾರಣೆ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು